‘ಸಿನಿಮಾದಲ್ಲಿ ಯಶಸ್ಸಿಗೆ ಫಾರ್ಮುಲಾ ಇಲ್ಲವೇ ಇಲ್ಲ’ ಎಂಬುದನ್ನು ಒತ್ತಿ ಹೇಳುತ್ತಾರೆ.

‘ಸಿನಿಮಾ ಅನ್ನುವುದು ಒಬ್ಬನ ಕಲ್ಪನೆಯಾಗಿರುತ್ತದೆ. ಆ ಕಲ್ಪನೆಗೆ ಜೀವ ಕೊಡುವುದು ಇನ್ನೊಬ್ಬರು. ಹಲವರು ಸೇರಿಕೊಂಡು ಸಿನಿಮಾ ಮಾಡುತ್ತಾರೆ. ಅವರೆಲ್ಲರ ಅಭಿರುಚಿಗಳೂ ಸ್ಪಾರ್ಕ್ ಆದಾಗ ಸಿನಿಮಾ ಗೆಲ್ಲುತ್ತದೆ. ಇಲ್ಲವಾದರೆ ಸೋಲುತ್ತದೆ. ಇದನ್ನು ಗಣಿತದ ಲೆಕ್ಕದ ಹಾಗೆ ಹೀಗೆಯೇ ಎಂದು ಹೇಳಲು ಸಾಧ್ಯವೇ ಇಲ್ಲ’ ಎಂಬುದು ಅವರ ಅನುಭವದ ಮಾತು.

ಗಣೇಶ್ ಅವರ ಪ್ರಕಾರ ಒಂದು ಸಿನಿಮಾದಲ್ಲಿ ವಾಸ್ತವ ಮತ್ತು ಕಲ್ಪನೆ ಎರಡೂ ಬೆರೆತಿರಬೇಕು. ಅದರಿಂದ ಮನರಂಜನೆ ಹುಟ್ಟಬೇಕು.

‘ಜನರಿಗೆ ಮನರಂಜನೆ ಕೊಡಬೇಕು ಎನ್ನುವುದನ್ನು ಬಿಟ್ಟರೆ ನನ್ನ ತಲೆಯಲ್ಲಿ ಬೇರೆ ಏನೂ ಇಲ್ಲ. ಯಾಕೆಂದರೆ ಜನರಿಗೆ ಬುದ್ಧಿ ಹೇಳೋಕೆ ನಾನು ಅಂಥ ಬುದ್ಧಿವಂತ ಅಲ್ಲ. ಲೈಟಾಗಿ ಮನರಂಜನೆಯ ಮೂಲಕವೇ ಬದುಕಿನ ಸತ್ಯಗಳನ್ನು ಕಾಣಿಸಬಹುದಷ್ಟೆ. ಜನರನ್ನು ಎರಡೂವರೆ ತಾಸು ಬೇರೆ ಲೋಕಕ್ಕೆ ಕರೆದುಕೊಂಡು ಹೋಗುವ ಮತ್ತು ಅಷ್ಟೇ ಸೇಫಾಗಿ ಕರೆದುಕೊಂಡು ಬರುವ ಜವಾಬ್ದಾರಿ ನಮ್ಮದು. ಅದನ್ನು ನಾನು ಮಾಡ್ತೀನಿ. ಕೊನೆಗೂ ನನ್ನ ಗುರಿ ಜನರಿಗೆ ಮನರಂಜನೆ ಕೊಡುವುದು. ಅದರ ಮೂಲಕವೇ ಹೊಸದೇನಾದರೂ ಹೇಳಬೇಕು’ ಎನ್ನುವ ಗಣೇಶ ಅವರಿಗೆ ಇಂದು ಸಿನಿಮಾ ಮೂಲಕ ಕ್ರಾಂತಿ ಮಾಡುವ ಪರಿಸ್ಥಿತಿ ಎಲ್ಲ ಎಂಬ ವಾಸ್ತವದ ಅರಿವೂ ಇದೆ.

‘ಹಿಂದೆ ಒಂದು ಸಿನಿಮಾ ಮೂಲಕ ಕ್ರಾಂತಿ ಮಾಡಬಹುದಿತ್ತು. ಆಗ ಸಿನಿಮಾ ಒಂದೇ ಮಾಧ್ಯಮ ಇತ್ತು. ಇಂದು ಜನರೇ ಕ್ರಾಂತಿ ಮಾಡುತ್ತಿದ್ದಾರೆ. ಇಂದಿನ ಸೋಷಿಯಲ್ ಮೀಡಿಯಾ ಯುಗದಲ್ಲಿ ಎಲ್ಲರೂ ಪತ್ರಕರ್ತರೇ, ಎಲ್ಲರೂ ನಟರೇ, ಎಲ್ಲರೂ ನಿರ್ದೇಶಕರೇ. ನಾವು ಅದಕ್ಕಿಂತ ಭಿನ್ನವಾಗಿ ರಂಜಿಸುವ ಪ್ರಯತ್ನ ನಾವು ಮಾಡಬೇಕಷ್ಟೆ’ ಎನ್ನುತ್ತಾರೆ ಅವರು.

ಸದ್ಯಕ್ಕೆ ಗಣೇಶ್ ಅವರ ‘ಟ್ರಿಪಲ್ ರೈಡಿಂಗ್’ ಸಿನಿಮಾದ ಡಬ್ಬಿಂಗ್ ಕೆಲಸ ನಡೆಯುತ್ತಿದೆ. ಸುನಿ ನಿರ್ದೇಶನದ ‘ಸಖತ್’ ಚಿತ್ರೀಕರಣ ನಡೆಯುತ್ತಿದೆ. ಯೋಗರಾಜ್ ಭಟ್ ನಿರ್ದೇಶನದ ‘ಗಾಳಿಪಟ 2’ ಸಿನಿಮಾದ ಅಂತಿಮ ಹಂತದ ಚಿತ್ರೀಕರಣ ಬಾಕಿ ಇದೆ. ಈ ಮೂರೂ ಸಿನಿಮಾಗಳ ಬಗ್ಗೆ ಗಣೇಶ್ ಅವರಿಗೆ ಸಾಕಷ್ಟು ನಿರೀಕ್ಷೆಯಿದೆ.

ವಯಸ್ಸು ನಲ್ವತ್ತರ ಗಡಿದಾಟಿ ಎರಡು ವರ್ಷಗಳೇ ಕಳೆದಿದ್ದರೂ ಮುಖದಲ್ಲಿ, ಅವರ ನಿಷ್ಕಲ್ಮಷ ನಗುವಿನಲ್ಲಿ ಅದೇ ತಾಜಾತನವಿದೆ. ಜನರನ್ನು ರಂಜಿಸುವ ತಮ್ಮ ಕಾಯಕವನ್ನು ಇನ್ನಷ್ಟು ಉತ್ಸಾಹದಿಂದ ಮುಂದುವರಿಸುವ ಉಮೇದು ಅವರ ಮಾತಿನಲ್ಲಿ, ನಡೆಯಲ್ಲಿ ಎದ್ದು ಕಾಣುತ್ತದೆ.



ಪುನೀತ್ ರಾಜ್‌ಕುಮಾರ್ ಮತ್ತು ಸತ್ಯಪ್ರಕಾಶ್

# ಪುನೀತ್–ಸತ್ಯಪ್ರಕಾಶ್ ಹೊಸ ಮ್ಯಾಚ್

ಪುನೀತ್ ರಾಜ್‌ಕುಮಾರ್ ಈಗ ಡಿ. ಸತ್ಯಪ್ರಕಾಶ್ ಜೊತೆಗೆ ಮ್ಯಾಚ್ ಆಡುತ್ತಿದ್ದಾರೆ. ಇಬ್ಬರೂ ಪರಸ್ಪರ ವಿರುದ್ಧ ತಂಡಗಳಲ್ಲಿ ಆಡುತ್ತಿಲ್ಲ, ಒಂದೇ ತಂಡದಲ್ಲಿ ಜೊತೆಯಾಗಿ ಆಡಲು ನಿರ್ಧರಿಸಿದ್ದಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪುನೀತ್ ಮತ್ತು ಸತ್ಯಪ್ರಕಾಶ್ ಅವರ ಅಭಿರುಚಿಗಳು, ಉದ್ದೇಶಗಳು ಮ್ಯಾಚ್ ಆಗಿವೆ. ಹಾಗಾಗಿ ಇಬ್ಬರೂ ಒಂದೇ ದಾರಿಯಲ್ಲಿ ಒಂದಿಷ್ಟು ದೂರ ಕ್ರಮಿಸಲು ನಿರ್ಧರಿಸಿದ್ದಾರೆ.

ಸತ್ಯಪ್ರಕಾಶ್ ಅವರ ಹೊಸ ಸಿನಿಮಾದ ಹೆಸರು ‘ಮ್ಯಾನ್ ಆಫ್ ದಿ ಮ್ಯಾಚ್’. ಸಿನಿಮಾ ಆಡಿಷನ್ ಪರಿಕಲ್ಪನೆಯನ್ನು ಇಟ್ಟುಕೊಂಡು ಒಂದೇ ಜಾಗದಲ್ಲಿ ಚಿತ್ರೀಕರಣ ಮಾಡಿದ ಈ ಸಿನಿಮಾ ವಿಭಿನ್ನ ಕಥಾಹಂದರವನ್ನು ಹೊಂದಿದೆ ಎಂದು ಚಿತ್ರತಂಡವೇ ಹೇಳಿಕೊಂಡಿದೆ. ಮೊದಲು ಈ ಚಿತ್ರವನ್ನು ಸತ್ಯ ಪಿಕ್ಚರ್ಸ್ ಮತ್ತು ಮಯೂರ ಪಿಕ್ಚರ್ಸ್ ಸೇರಿಕೊಂಡು ನಿರ್ಮಾಣ ಮಾಡಲು ನಿರ್ಧರಿಸಿದ್ದವು. ಈಗ ಈ ಚಿತ್ರದ ಎಳೆ ಇಷ್ಟವಾಗಿ ಪುನೀತ್ ಅವರೂ ಬಂಡವಾಳ ಹಾಕುತ್ತಿದ್ದಾರೆ. ಪಿಆರ್‌ಕೆ ಬ್ಯಾನರ್ ಅಡಿಯಲ್ಲಿಯೇ ನಿರ್ಮಾಣವಾಗುತ್ತಿರುವ ‘ಮ್ಯಾನ್ ಆಫ್ ದಿ ಮ್ಯಾಚ್’ ಸಿನಿಮಾ ಚಿತ್ರೀಕರಣ ಈಗ ಮುಗಿದಿದೆ. ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ.

ಕಳೆದ ವರ್ಷವೇ ಸತ್ಯಪ್ರಕಾಶ್, ಪುನೀತ್ ಅವರಿಗೆ ಒಂದು ಸಿನಿಮಾ ನಿರ್ದೇಶನ ಮಾಡಬೇಕಾಗಿತ್ತು. ಆದರೆ ಲಾಕ್‌ಡೌನ್ ಕಾರಣಕ್ಕೆ ಆ ಸಿನಿಮಾ ವಿಳಂಬವಾಗಿದೆ. ಈಗ ಸತ್ಯಪ್ರಕಾಶ್ ಅವರ ನಿರ್ದೇಶನದ ಚಿತ್ರಕ್ಕೆ ಪುನೀತ್ ಹಣ ಹೂಡುತ್ತಿದ್ದಾರೆ. ಹಾಗೆಯೇ ಪುನೀತ್ ಅವರ ಕೈಯಲ್ಲಿರುವ ಕೆಲವು ಸಿನಿಮಾಗಳು ಮುಗಿದ ಮೇಲೆ ಸತ್ಯಪ್ರಕಾಶ್ ನಿರ್ದೇಶನದ ಚಿತ್ರವೂ ಪ್ರಾರಂಭವಾಗಬಹುದು.

ಈಗಾಗಲೇ ‘ರಾಮಾ ರಾಮಾ ರೇ’ ಮತ್ತು ‘ಒಂದಲ್ಲಾ ಎರಡಲ್ಲಾ’ ಸಿನಿಮಾಗಳ ಮೂಲಕ ತಮ್ಮತನದ ಛಾಪನ್ನು ಒತ್ತಿರುವ ಸತ್ಯಪ್ರಕಾಶ್ ಮತ್ತು ಜನಪ್ರಿಯ ಸ್ಟಾರ್ ನಟ ಪುನೀತ್ ರಾಜ್‌ಕುಮಾರ್ ಅವರ ಕಾಂಬಿನೇಷನ್‌ನಲ್ಲಿ ಎಂಥ ಸಿನಿಮಾ ಶುರುವಾಗಬಹುದು ಎಂಬ ಕುತೂಹಲವಂತೂ ಗಾಂಧಿನಗರದಲ್ಲಿ ಇದ್ದೇ ಇದೆ. ಇಂಥ ಕಾಂಬಿನೇಷನ್‌ಗಳಿಂದಲೇ ಕನ್ನಡ ಚಿತ್ರರಂಗದ ದೆಸೆಯನ್ನು ತುಸುವಾದರೂ ಬದಲಿಸಲು ಸಾಧ್ಯ.